ಕರ್ನಾಟಕ ವಿಧಾನ ಸಭೆ

KARNATAKA LEGISTISTIVE ASSEMBLY

ಶುಕ್ರವಾರ ದಿನಾಂಕ ೨೦ನೇ ಮಾರ್ಚಿ ೧೯೮೭ ಫಾಲ್ಗುಣ ೨೯, ೧೯೦೮ ಶಕ,

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧-೦೦

ಗಂಟೆಗೆ ಸಮಾವೇಶಗೊಂಡಿತು.

ಕಾಂಗ್ರೆಸ್ 'ಐ' ಸದಸ್ಯರಾದ ಧರಣಿ ಸತ್ಯಾಗ್ರಹ

(ಅಧ್ಯಕ್ಷರು (ಶ್ರೀ ಬಿ. ಜೆ. ಬಣಕಾರ್) ಅವರು ಪೀಠವನ್ನು ಅಲಂಕರಿಸಿದ್ದರು)

ಅಧ್ಯಕ್ಷರು.—ವಿತ್ತೀಯ ಕಾರ್ಯಕಲಾಪಗಳು. ಮಾನ್ಯ ಮಂತ್ರಿಗಳಿಂದ ಬೇಡಿಕೆಗಳ ಮಂಡನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿವಸ ತಮ್ಮಲ್ಲಿ ಮನವಿ ಮಾಡಿಕೊಂಡೆವು. ನಿನ್ನೆ ಮನವಿ ಮಾಡಿಕೊಂಡು ಕೇಳಿದವು, ತಮ್ಮ ರೂಮಿನಲ್ಲಿ ಬಂದಿದ್ದವು. ಅಲ್ಲಿ ಮಾನ್ಯ ಸದಸ್ಯರೆಲ್ಲರೂ ಇದ್ದರು. ಮಾನ್ಯ ಮಂತ್ರಿಗಳೂ ಸಹ ಇದ್ದರು. ಈ ರೀತಿ ಡಿಮ್ಯಾಂಡ್ ಗಳನ್ನು ಪಾಸ್ ಮಾಡುವುದು ಸರಿಯಾದುದಲ್ಲ. ಒಂದಾದ ಮೇಲೆ ಒಂದು ಚರ್ಚೆಯಿಲ್ಲದೆ ಪಾಸ್ ಮಾಡುವುದು ಸರಿಯಾದುದಲ್ಲ. ಅದರಲ್ಲೂ ಮುಖ್ಯವಾಗಿರತಕ್ಕ ಪ್ರಶ್ನೆ ಇತ್ಯರ್ಥ ಆಗದೇ ಇರಬೇಕಾದರೆ, ವೆಲ್‌ನಲ್ಲಿ ವಿರೋಧಪಕ್ಷದ ಎಲ್ಲಾ ಸದಸ್ಯರೂ ಕುಳಿತಿರಬೇಕಾದರೆ, ಎಲ್ಲರೂ ಎಂದರೆ ಲೀಡರ್ ಪಾರ್ಟಿ ಕುಳಿತಿರಬೇಕಾದರೆ ಈ ರೀತಿ ಮಾಡುವುದು ಸರಿಯಾದುದಲ್ಲ ಎಂದು ತಪ್ಪಿಗೆ ಹೇಳಿದ್ದೆವು. ನಿನ್ನೆಯ ದಿವಸವೂ ಮನವಿ ಮಾಡಿಕೊಂಡೆವು ಅಡ್ಜರ್ನ್ ಮಾಡಿ. ಮುಂದಕ್ಕೆ ಹೋಗಿ ಎಂದು. ಟೈಮ್ ತೆಗೆದುಕೊಳ್ಳೋಣ ಎಂದು ತಮ್ಮ ಕಡೆಯವರು ಸಹ ಹೇಳಿದರು. I am sorry. ತಮ್ಮ ಕಡೆಯವರಲ್ಲ. ಆ ಕಡೆಯವರು. ತಮ್ಮ ಮೂಲಕ ಆ ಕಡೆಯವರನ್ನು ಹೇಳಿದರು. ಮಾನ್ಯ ಬೊಮ್ಮಾಯಿಯವರು, ಮಾನ್ಯ ಪಟೇಲ್ ಆವರು ಎಲ್ಲರೂ ಹೇಳಿದರು—ಇವತ್ತಿನದಿನ ವಿಷಯವನ್ನು ಚರ್ಚೆ ಮಾಡೋಣ, ಇತ್ಯರ್ಥ ಮಾಡೋಣ ಸೋಮವಾರದವರೆಗೆ ಆಗಲಿ ಎಂದು. ಹೀಗಿರಬೇಕಾದರೆ ಏತಕ್ಕೆ ಇದನ್ನು ಮಾಡುತ್ತಾ ಇದ್ದೀರಿ ? ಮಾನ್ಯ ಅಧ್ಯಕ್ಷರೆ, ಹಾಕಿರತಕ್ಕ ಡಿಮ್ಯಾಂಡ್ ಎಲ್ಲವನ್ನೂ ಒಂದೇ ದಿವಸದಲ್ಲಿ ಪಾಸ್ ಮಾಡಬೇಕು ಎಂದರೆ ಅದೆಂಥ ಪ್ರಜಾಪ್ರಭುತ್ವವೋ ನನಗಂತೂ ಗೊತ್ತಿಲ್ಲ. ಪ್ಲಾನಿಂಗ್, ಲ್ಯಾಂಡ್ ರೆವಿನ್ಯೂ, ಸ್ಟ್ಯಾಂಪ್ ರಿಜಿಸ್ಟ್ರೇಷನ್, ರಿಲಿಜಿಯಸ್ ಅಂಡ್ ಚಾರಿಟಬಲ್ ಇನ್ಸ್‌ಟಿಟ್ಯೂಷನ್ ಲೇಬರ್ ಅಂಡ್ ಎಂಪ್ಲಾಯ್ಮೆಂಟ್, ಇದೆಲ್ಲಾ ಮಾನ್ಯ ಬೊಮ್ಮಾಯಿಯವರಿಗೆ ಸೇರಿದೆ. ಜೆ. ಎಚ್. ಪಟೇಲ್ ಸಾಹೇಬರದು ಇಂಡಸ್ಟ್ರೀಸ್ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಇದೆ. ಅದರ ಬಗ್ಗೆ ಬಹಳ ಮಾತನಾಡಬೇಕಾಗಿದೆ. ಆ ಕಡೆಯವರೂ ಮಾತನಾಡಬೇಕಾಗಿದೆ. ಮಾನ್ಯ ಕೃಷ್ಣಾರೆಡ್ಡಿಯವರದು ಅನಿಮಲ್ ಹಸ್ಬೆಂಡ್ರಿ, ಫಿಷರೀಸ್ ಸಿರಿಕಲ್ಚರ್ ಇದೆ. ಅವರೂ ಸಲಭವಾಗಿ ಹೋಗುತ್ತಾರೆ. ವೆಲ್‌ಫೇರ್ ಆಫ್ ಎಸ್. ಸಿ; ಎಸ್‌ಟಿ; ಅಂಡ್ ಬ್ಯಾಕ್‌ವರ್ಡ್ ಕ್ಲಾಸಸ್ ಸ್ಪೆಷಲ್ ಕಾಂಪೊನೆಂಟ್ ಪ್ಲಾನ್ ಇತ್ಯಾದಿ ಇದೆ.

ಅಧ್ಯಕ್ಷರು....ತಮಗೆ ಏನಾಗಬೇಕು ಹೇಳಿ ?

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಬಸವಣ್ಣಪ್ಪನವರೆ ಇಲಾಖೆಯಂ ಡಿಮ್ಯಾಂಡೂ ಕೂಡ ಇದೆ. ಅವರೂ ಕೂಡ ತಪ್ಪಿಸಿಕೊಂಡು ಹೋಗುವ ಪರಿಸ್ಥಿತಿಯಲ್ಲಿರುವ ಹಾಗೆ ಕಾಣುತ್ತದೆ. ಅದಕ್ಕಾಗಿ ನಾನು ತಮ್ಮಲ್ಲಿ ಕೇಳಿಕೊಳ್ಳುವುದು ಇಷ್ಟೆ ಈ ಮನೆಯ ಘನತೆ ಗೌರವವನ್ನು ಎತ್ತಿ ಹಿಡಿಯುವುದು ತಮ್ಮ ಕೈಯಲ್ಲಿ ಇದೆ. ಅದನ್ನು ತಾವು ಮಾಡುತ್ತೀರಿ ಎಂಬುದು ನನಗೆ ಗೊತ್ತು. ಇಂತಹ ಒಂದು ಸಂದರ್ಭದೊಳಗೆ ತಮ್ಮನ್ನು ಕೇಳಿಕೊಳ್ಳುವುದು ಮತ್ತು ಅವರನ್ನೂ ಕೂಡ ಕೇಳಿಕೊಳ್ಳುವುದೇನೆಂದರೆ ಏನೇ ವಿಷಯವನ್ನು ಟ್ರ್ಯಾನ್ಸಾಕ್ಟ್ ಮಾಡುವುದಕ್ಕೆ ಹೋಗಬೇಡಿ. ಸೋಮವಾರದ ತನಕ ಮುಂದುವರಿಸಿ. ಆವತ್ತಿನ ದಿವಸ ಚರ್ಚೆ ಮಾಡಿ ಒಂದು ರೀತಿಯಲ್ಲಿ ಇತ್ಯರ್ಥವಾಗಬಹುದೆನ್ನುವ ಇಂಡಿಕೇಷನ್ ಬಂದಿರುವುದರಿಂದ, ಆಗುತ್ತದೆಯೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ಆ ರೀತಿಯ ಇಂಡಿಕೇಷನ್ ಬಂದಿರುವುದರಿಂದ ನೋಡೋಣ. ಆದರೆ ಬಹಳ ಸಂತೋಷ. ಏನೋ ಒಂದು ರೀತಿಯಲ್ಲಿ ಶುಭವೊ-ಅಶುಭವೊ ತೀರ್ಮಾನ ಆಗಬಹುದು. ಅಲ್ಲಿಯವರೆಗೆ ಸಭೆಯನ್ನು ಮುಂದೂಡಿ, ಅಡ್ಜರ್ನ್ ಮಾಡಿ ಎಂದು ತಮಗೆ ಹೇಳುತ್ತೀದ್ದೇನೆ. ಅವರೂ ಸಹ ತಮ್ಮ ಜೊತೆಯಲ್ಲಿ ಸಹಕಾರ ನೀಡಬೇಕು. ಎಲ್ಲಾ ವಿರೋಧಪಕ್ಷದವರು ಇಲ್ಲಿ ಫ್ರೆಂಡ್ಲಿ ಅಪೋಸಿಸನ್ ಪಾರ್ಟಿ ಎಂದು ಬೇರೆ ಹೇಳುತ್ತಾರೆ. ಫ್ರೆಂಡ್ಲಿ ಅಪೋಸಿಸನ್ ಪಾರ್ಟಿ ಎಂದು ಹೇಳುತ್ತಿರುವುದರಿಂದ ನಾವು ಹೇಳುತ್ತಿದ್ದೇವೆ. ತಾವು ಅದನ್ನು ಒಪ್ಪಿಕೊಳ್ಳಬೇಕು. ನಾವು ತಮ್ಮನ್ನು ಫ್ಲೀಸ್ ಮಾಡುತ್ತಿಲ್ಲ. ಅವರು ಮಾಡಿರುವುದೆಲ್ಲಾ ೧೦೦ ಪರ್ಸೆಂಟ್ ಸರಿ ಎಂದೂ ಹೇಳುತ್ತಿಲ್ಲ. ಅಥವಾ ನೀವು ಮಾಡಿರುವುದೆಲ್ಲಾ ೧೦೦ ಪರ್ಸೆಂಟ್ ಕರೆಕ್ಟ್ ಎಂದು ಕೂಡ ನಾನು ಹೇಳುತ್ತಿಲ್ಲ. ವಿಷಯ ನಡೆಯುತ್ತದೆ ವಿಷಯ ಬರುತ್ತದೆ. ಒರೆದು ದೊಡ್ಡ ಮಾತನ್ನು ತಾವು ನಮಗೆ ಹೇಳುತ್ತಿರುತ್ತೀರಿ. To err is human and to forgive is divine ಅಂತ ತಾವೇ ಅನೇಕ ಸಾರಿ ಇಲ್ಲಿ ಹೇಳಿದ್ದೀರಿ. Some error might have taken place. You are divine. To forgive is divine. You please do that. ಅದನ್ನು ಮಾಡಿ ಎಂದು ತಮಗೆ ನಾನು ಕೇಳುತ್ತಿದ್ದೇನೆ, ಅದರ ಬದಲು If you want to become demons and devilish, there is no use. ಆ ತರಹದ ಪರಿಸ್ಥಿತಿಗೆ ತೆಗೆದುಕೊಂಡು ಬರಬೇಡಿ. ಇವತ್ತು ಇದನ್ನೆಲ್ಲಾ ಮಾಡಿದರೆ ಅದೇ ರೀತಿಯಾಗುತ್ತದೆ ಎಲ್ಲಾ ಒಂದೇ ದಿವಸದಲ್ಲಿ ಡಿಮ್ಯಾಂಡ್‌ಗಳನ್ನು ಪಾಸ್ ಮಾಡಿದರೆ ಏನಾಗುತ್ತದೆ ? ಅದನು ದಯಮಾಡಿ ಮಾಡಬೇಡಿ. ಸೋಮವಾರದ ತನಕ ಸಭೆಯನ್ನು ಅಡ್ಜರ್ನ್ ಮಾಡಿಬಿಡಿ, ಇದ ಬೇಡ ಎಂದಂ ಹೇಳುವುದಾದರೆ, ತಮಗೆ ಇಷ್ಟಬಂದ ಹಾಗೆ ಮಾಡಿಕೊಂಡು ಹೋಗಿ. ವಂತೆ ಪುನಃ ನಾವು ನಿನ್ನೆ ದಿವಸದ ರೀತಿಯಲ್ಲಿ ಇವತ್ತೂ ವಾಕೌಟ್ ಮಾಡುತ್ತೇವೆ. ಇದು ಒಳ್ಳೆಯ ದಾಗುವುದಿಲ್ಲ. ಇದು ಸರಿಯಾದುದಲ್ಲ.

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಅಸೆಂಬ್ಲಿ ಈ ಒಂದು ದಾರಿಯಲ್ಲಿ ಹೋಗುತ್ತಿರುವುದನ್ನು ನೋಡಿದರೆ, ಇದನ್ನು ನಾನು ನಿಜವಾಗಿಯೂ ಪ್ರೊಟೆಸ್ಟ್ ಮಾಡುತ್ತೇನೆ, ಈ ರೀತಿ ವಿರೋಧಪಕ್ಷವನ್ನು ಇಲ್ಲಿ ಕೂಡಿಸಿಕೊಂಡು ೫-೫ ನಿಮಿಷಗಳಲ್ಲಿ ಕೋ-ಆಪರೇಷನ್ ಡಿಪಾರ್ಟ್‌ಮೆಂಟ್‌ನ ಡಿಮ್ಯಾಂಡನ್ನು ಪಾಸು ಮಾಡಿಕೊಳ್ಳುತ್ತಾರೆ. ಆಮೇಲೆ ಇವತ್ತು ಲೇಬರ್, ರೆವಿನ್ಯೂ ಇಲಾಖೆಗಳ ಬೇಡಿಕೆಗಳನ್ನು ಪಾಸು ಮಾಡಿಕೊಳ್ಳುತ್ತಾರೆ. ಇದು ನಿಜವಾಗಿಯೂ ಬಹಳ ಅನ್ಯಾಯ.

ಒಬ್ಬ ಮಾನ್ಯ ಸದಸ್ಯರು.—ಏನು ಮಾಡಬೇಕು.

ಶ್ರೀ ಆರ್. ವೆಂಕಟರಾಮಯ್ಯ.—ಏನು ಮಾಡಬೇಕೆಂದರೆ, ನಾನು ಇಲ್ಲಿ ಅಡ್ಯಂತಾಯರವರನ್ನ ಡಿಫೆಂಡ್ ಮಾಡುವುದಕ್ಕೆ ಬಂದಿಲ್ಲ. ಅವರನ್ನು ಡಿಫೆಂಡ್ ಮಾಡುತ್ತಿಲ್ಲ. ಅವರೇನಾದರೂ ತಪ್ಪು ತಪ್ಪಿರಿದ್ದರೆ ಕಾನೂನು ಪ್ರಕಾರ ರೂಲ್ಸ್ ಪ್ರಕಾರ ಏನು ಬೇಕೋ ಅದನ್ನು ತೀರ್ಮಾನ ಮಾಡಬೇಕಾಗುತ್ತದೆ. ಅದನ್ನು ಬಿಟ್ಟು ಈ ರೀತಿ ಪ್ರತಿ ದಿನವೂ ಇವರು ಇಲ್ಲಿ (ವೆಲ್‌ನಲ್ಲಿ) ಕುಳಿತು ಕೊಳ್ಳುವುದು, ಮತ್ತು ನೀವು ಒಂದೊಂದು ಡಿಮ್ಯಾಂಡನ್ನು ೫-೫ ನಿಮಿಷದಲ್ಲಿ ಪಾಸು ಮಾಡುವುದೆಂದರೆ: It become a mockery of Democracy; ಆದ್ದರಿಂದ ದಯಮಾಡಿ ಸದನವನ್ನು ಸೋಮವಾರದವರೆಗೆ ಮುಂದೂಡಿ, ಅಂದೇ ತೀರ್ಮಾನ ಮಾಡೋಣ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಅಲ್ಲಿಯವರೆಗೂ ಸದನದ ಕಾರ್ಯಕಲಾಪಗಳನ್ನು ಮುಂದೂಡುವುದು ಒಳ್ಳೆಯದು.

ಇಲ್ಲದಿದ್ದರೆ ಇದನ್ನು ನಾನು ನಿಜವಾಗಿಯೂ ಪ್ರೊಟೆಸ್ಟ್ ಮಾಡುತ್ತೇವೆ. ನಾವೂ ಕೂಡ ಇವತ್ತು ಪುನಃ ವಾಕೌಟ್ ಮಾಡುತ್ತೇವೆ. ನೀವು ಪುನಃ ಇಲಾಖೆಯ ಬೇಡಿಕೆಗಳ ಬಗ್ಗೆ ಚರ್ಚೆ ಪ್ರಾರಂಭ ಮಾಡಿದರೆ ಪುನಃ ವಾಪಸ್ಸು ಬಂದು ಪಾರ್ಟಿಸಿಪೇಟ್ ಮಾಡುತ್ತೇನೆ. ಆದರೆ ಈ ನೀತಿಯನ್ನು ಅನುಸರಿಸಿದರೆ ಇದು ನಿಜವಾಗಿಯೂ ಡೆಮಾಕ್ರಸಿಯಲ್ಲ. ಈ ರೀತಿ ನಡೆಯುತ್ತಿರುವುದು ಸರಿಯಲ್ಲ ಎಂಬುದಾಗಿ ನಾನು ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಅವರ ಕಡೆಯವರೂ ಕೂಡ ಇದಕ್ಕೆ ವಿರೋಧವಾಗಿದ್ದಾರೆ. ನಿನ್ನೆ ಕೆಲವು ಮಾನ್ಯ ಸದಸ್ಯರು ಹೇಳುತ್ತಿದ್ದರು. ಏನು ಸಾರ್, ನಾವು ಇಲಾಖೆಯ ಬೇಡಿಕೆಯ ಮೇಲೆ ಚರ್ಚೆ ಮಾಡಬೇಕೆಂದಿದ್ದರೂ ಅದಕ್ಕೆ ಅವಕಾಶವೇ ಇಲ್ಲ ಅದಕ್ಕಾಗಿ ತಾವೂ ಕೂಡ ಆ ರೀತಿ ಮಾಡಂವುದು ಬೇಡ. ಸದಸ್ಯರು ಮಾತನಾಡುವುದಕ್ಕೆ ಅವಕಾಶವಾಗಬೇಕು.

(ಗೊಂದಲ)

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ, ಈ ರೀತಿ ವಿರೋಧ ಪಕ್ಷದ ಸದಸ್ಯರನ್ನು ಮಧ್ಯದಲ್ಲಿ ಕೂಡಿಸಿಕೊಂಡು ಸದನವನ್ನು ನಡೆಸಿದ್ದು ಯಾವಾಗಲೂ ಇಲ್ಲ. ನಾನೂ ಸುಮಾರು ೧೦ ವರ್ಷಗಳಿಂದ ಈ ಮನೆಯ ಸದಸ್ಯನಾಗಿ ನೋಡುತ್ತಿದ್ದೇನೆ. ಈ ರೀತಿ ಎಂದೂ ನಡೆದಿಲ್ಲ. ಸರ್ಕಾರಕ್ಕೆ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಇಚ್ಛೆ ಇಲ್ಲವೊ? ಅಥವಾ ಸದನದಲ್ಲಿ ಸರಿಯಾದ ರೀತಿಯಲ್ಲಿ ಕಾರ್ಯ ಕಲಾಪಗಳನ್ನು ನಡೆಸಬಾರದು ಎನ್ನುತಕ್ಕಂತಹ ಉದ್ದೇಶವಿದೆಯೇ ? ಯಾವುದೂ ಕೂಡ ನನಗೆ ಅರ್ಥ ವಾಗುವುದಿಲ್ಲ. ಏನೆಂದರೆ ಇವತ್ತು ಅನೇಕ ಸಮಸ್ಯೆಗಳನ್ನು ನಾವು ಸದನದಲ್ಲಿ ಎತ್ತಿ ಹೇಳಬೇಕಾಗುತ್ತದೆ. ನಾವು ಇಲ್ಲಿಗೆ ಬರತಕ್ಕದ್ದೂ ಅದಕ್ಕಾಗಿಯೇ. ಇಲಾಖೆಯ ಬೇಡಿಕೆಯ ಮೇಲೆ ಮಾತನಾಡ ಬೇಕಾಗುತ್ತದೆ. ಇರತಕ್ಕಂತಹ ಲೋಪದೋಷಗಳನ್ನು ಎತ್ತಿ ತೋರಿಸಬೇಕಾಗುತ್ತದೆ. ಆದರೆ ಇಂತಹ ಸಂದರ್ಭದಲ್ಲಿ ಎಲ್ಲರನ್ನು ಮಧ್ಯದಲ್ಲಿ ಕೂಡಿಸಿ, ಬಾವಿಯಲ್ಲಿ ಹಾಕಿ ಬಿಟ್ಟು ಸದನದಲ್ಲಿ ವ್ಯವಹಾರವನ್ನು ನಡೆಸುವುದಾದರೆ, ಇದು ನಿಜವಾಗಿಯೂ ಪ್ರಜಾಪ್ರಭುತ್ವಕ್ಕೆ ವಿರೋಧವಾದಂತಹ ವ್ಯವಸ್ಥೆ ಇದು. ಆದ್ದರಿಂದ ಅವರನ್ನು ಬಾವಿಯಿಂದ ಮೇಲಕ್ಕೆತ್ತಿ, ಅವರವರ ಸ್ಥಳದಲ್ಲಿ ಕೂಡಿಸಿ ಆದಮೇಲೆ ಸದನದ ವ್ಯವಹಾರವನ್ನು ನಡೆಸಬೇಕು.

(ಗೊಂದಲ)

ಶ್ರೀ ವೇದಾಂತ ಹೆಬ್ಬಿಗೆ.—ದಯವಮಾಡಿ ಸದನದ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ಪಂಪಾಪತಿ.—ನಾನು ಮಾತನಾಡುವಾಗ ಅವರಿಗೆ ಏಕೆ ಅಷ್ಟೊಂದು ಸಿಟ್ಟು ಎಂಬುದು ನನಗೆ ಗೊತ್ತಿಲ್ಲ.

ಶ್ರೀ ಜಿ. ನಾರಾಯಣ ಕುಮಾರ್.—ಬಾವಿಗೆ ನಾವು ತಳ್ಳಿಲಿಲ್ಲ. ಅವರೇ ಬಾವಿಯಲ್ಲಿ ಬಿದ್ದು ಒದ್ದಾಡುತ್ತಿದ್ದಾರೆ.

ಶ್ರೀ ಪಂಪಾಪತಿ.—ಜನತಾ ಪಕ್ಷ ವಿರೋಧ ಪಕ್ಷದಲ್ಲಿ ಇದ್ದಾಗಲೂ ಕೂಡಾ ಅವರ ಜೊತೆ ನಾವೂ ಧರಣಿ ಮಾಡಿದ್ದೇವೆ. ಆದರೆ ಈ ರೀತಿ ಯಾವಾಗಲೂ ವರ್ತಿಸಿಲ್ಲ.

ಅಧ್ಯಕ್ಷರು.—ತಾವು ಸಲಹೆ ಕೊಡಿ. (ಗೊಂದಲ)

ಶ್ರೀ ಪಂಪಾಪತಿ.—ನಾವು, ಜನತಾ ಪಕ್ಷದವರು ವಿರೋಧ ಪಕ್ಷದಲ್ಲಿದ್ದಾಗ ಧರಣ ಮಾಡಿದಾಗ ಹೊರಗಡೆ ಕಳುಹಿಸಿದ್ದರೇ ಹೊರತು ಹೀಗೆ ಒಳಗಡೆ ಕೂಡಿಸಿ ಕಾರ್ಯಕಲಾಪ ನಡೆಸಿಲ್ಲ. ಆದುದರಿಂದ ಮಧ್ಯೆ ಕುಳಿತಿರತಕ್ಕವರ ಸಮಸ್ಯೆಯನ್ನು ಇತ್ಯರ್ಥಪಡಿಸಿ ಕಾರ್ಯಕಲಾಪಗಳನ್ನು ನಡೆಸಬೇಕು. ಹಾಗೂ ಕಾರ್ಯಕಲಾಪದಲ್ಲಿ ನಮಗೆ ಭಾಗವಹಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು. ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ನಿನ್ನೆ ಹೇಳಿದ ವಿಚಾರಗಳನ್ನೇ ಮತೆ ನಮ್ಮ ಗೆಳೆಯರು ಹೇಳಿದ್ದಾರೆ. ಸರ್ಕಾರಕ್ಕೆ ಅನಿವಾರ್ಯವಾಗಿ ಈ ಪರಿಸ್ಥಿತಿಗೆ ಇವತ್ತು ತಂದ ದೂಡಿದ್ದಾರೆ. ಇದು ಅನಿವಾರ್ಯವಾದರೂ ನಮ್ಮ ಕರ್ತವ್ಯವನ್ನು ನಾವು ಮಾಡಬೇಕಾಗುತ್ತದೆ ಮಾನ್ಯ ಕೃಷ್ಣನ್ ಅವರು ''ಕೃಷ್ಣ ಸಂಧಾನ'' ಮಾಡಿದರು. ಆದರೆ ನಾನು ಒಂದನ್ನು ನೆನಪುಮಾಡಿ ಕೊಡಬೇಕಾಗುತ್ತದೆ. ಅರ್ಜುನನಿಗೆ ಕೃಷ್ಣ ಏನು ಉಪದೇಶ ಮಾಡಿದ ? ಕರ್ತವ್ಯ ಪಾಲನೆ ಮಾಡು ವಾಗ ಇದೆಲ್ಲಾ ಆಗುತ್ತದೆ. (ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಕೃಷ್ಣ ಅರ್ಜುನನನ್ನು ಕುರಿತು ಏನು ಹೇಳಿದ್ದಾನೆಂದು ಗೊತ್ತ ?

ಶ್ರೀ ಕೆ. ಎಚ್. ಶ್ರೀನಿವಾಸ್.—(ಧರಣಿ ಕೂತ ಸ್ಥಳದಿಂದ) ಕೃಷ್ಣ ಹೋಗಿ ಮಾತನಾಡಿದ್ದು ಕೌರವರ ಹತ್ತಿರ.

ಅಧ್ಯಕ್ಷರು.—ತಾವು ಅಲ್ಲಿಂದ ನಿಂತು ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ನಾನು ಅದನ್ನು ಹೇಳಿಲ್ಲ. ಯಾರು ಕೌರವರು, ಯಾರು ಪಾಂಡವರು ಎಂದು ಹೇಳುವುದು ಕಷ್ಟ ಇದೆ. (ಗೊಂದಲ)

ಶ್ರೀ ಕೆ. ಎಚ್. ಶ್ರೀನಿವಾಸ್.—ಯಾರು ಆಡಳಿತ ಮಾಡುತ್ತಿದ್ದಾರೋ ಅವರೇ ಕೌರವರು.

ಅಧ್ಯಕ್ಷರು.—ತಾವು ಅಲ್ಲಿಂದ ಏನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಯಾರು ಕೌರವರು, ಯಾರು ಪಾಂಡವರು ಎಂಬುದನ್ನು ಜನತೆ ನಿರ್ಣಯ ಮಾಡುತ್ತದೆ. ಆದನ್ನು ಮಾಡಿದ್ದಾರೆ. ಸರ್ಕಾರದ ಪರವಾಗಿ ಅನೇಕ ಸಲ ಸೂಚನೆ ಕೊಟ್ಟಿದ್ದೇವೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ವನವಾಸ ಮುಗಿದ ಮೇಲೆ ಎಲ್ಲಾ ತೀರ್ಮಾನವಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಪಂಪಾಪತಿಯವರು ಹೇಳಿದ ಪ್ರಕಾರ ನಾವು ಯಾರನ್ನೂ ಬಾವಿಯಲ್ಲಿ ನೂಕಿಲ್ಲ. ಸರ್ಕಾರ ಏನೂ ಪ್ರತಿಷ್ಠೆ ಮೇಲೆ ನಿಂತಿಲ್ಲ. ಈ ಮನೆಯ ಗೌರವ ವನ್ನು ಕಾಯುವುದಕ್ಕೆ ಕೆಲವು ಸಲಹೆ ಸೂಚನೆಗಳನ್ನು ನೀವು ಕೊಟ್ಟಿದ್ದೀರಿ. ಮಾನ್ಯ ಕೃಷ್ಣನ್ ಮಂಖಾಂತರ ಹೇಳಿದ್ದೇನೆ. ವಿರೋಧ ಪಕ್ಷದ ನಾಯಕರು ಮತ್ತು ಇವರ ಜೊತೆ ಮಾತನಾಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಸಹ ಮಾತನಾಡಿದ್ದಾರೆ. ಸರ್ಕಾರ ಏನೂ ಪ್ರತಿಷ್ಠೆ ಮೇಲೆ ನಿಂತಿಲ್ಲ. ಈ ಮನೆಯ ಗೌರವವನ್ನು ಕಾಯುವುದಕ್ಕೆ ಕೆಲವು ಸೂಚನೆಗಳು ಈ ಸಮಸ್ಯೆಯ ಬಿಕ್ಕಟ್ಟನ್ನು ಪರಿಹರಿಸುತ್ತವೆ. ನಾನು ಪುನಃ ಹೇಳುತ್ತಿದ್ದೇನೆ. ಚರ್ಚೆಯಲ್ಲಿ ಭಾಗವಹಿಸಿ ಸರ್ಕಾರದ ಅನೇಕ ನ್ಯೂನ್ಯತೆಗಳನ್ನು ಎತ್ತಿಹಿಡಿಯದೇ ಹೋದರೆ ನಮಗೂ ಕೂಡಾ ಉತ್ತರವನ್ನು ಕೊಡುವುದಕ್ಕಾಗು ವುದಿಲ್ಲ ನಮಗೂ ಮನಸ್ಸು ಇಲ್ಲ. ಇವತ್ತು ತಾವು ವೆಲ್‌ನಲ್ಲಿ ಕುಳಿತು ಹೇಳುವುದಾದರೆ ಹೇಗೆ ಚರ್ಚೆ ಮಾಡುವುದಕ್ಕಾಗುತ್ತದೆ ? ಆದರೆ ನಾವು ಕರ್ತವ್ಯವನ್ನು ಮಾಡಬೇಕಾಗಿದೆ. ಬಹಳ ವೇದನೆ ಯಿಂದ ಕರ್ತವ್ಯ ಮಾಡಬೇಕು. ನಾವು ಕರ್ತವ್ಯಚ್ಯುತಿ ಮಾಡುವುದಕ್ಕಾಗುವುದಿಲ್ಲ. (ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ಬೇಡಿಕೆಗಳ ಮೇಲೆ ಮಾನ್ಯ ವೆಂಕಟರಾಮಯ್ಯನವರು ಮಾತ ನಾಡುವವರಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರೂ ಮಾತನಾಡಲಿ, ತಾವೂ ಕೂಡಾ ಮಾತನಾಡಿ.

(ಗೊಂದಲ)

ಶ್ರೀ ಕೆ. ಬಿ. ಶಾಣಪ್ಪ.—ಅಡ್ವಂಟಾಯ ಅವರ ಅಮಾನತ್ತನ್ನು ವಾಪಸ್ಸು ತೆಗೆದುಕೊಂಡರೆ ಎಲ್ಲಾ ಸರಿಹೋಗುತ್ತದೆ. ತಾವು ಅನೇಕ ಸಾರಿ ದೊಡ್ಡ ಮನಸ್ಸು ಮಾಡಿದ್ದೀರಿ.

ಅಧ್ಯಕ್ಷರು.—ಈಗ ಯಾರೂ ಮಾತನಾಡಬೇಡಿ. ಮಾನ್ಯ ಬೊಮ್ಮಾಯಿಯವರು ಮಾತನಾಡಲಿ,

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಬಿಕ್ಕಟ್ಟಿನ ವಿಚಾರದಲ್ಲಿ ಮಾತನಾಡುವುದಿಲ್ಲ. ಮಾತನಾಡುವುದೂ ಸೂಕ್ತವಲ್ಲ ನಾನು ಪುನಃ ಹೇಳುತ್ತಿದ್ದೇನೆ ಸರ್ಕಾರದ ಪರವಾಗಿ ಅತ್ಯಂತ ವಿನಯ

ದಿಂದ ಕೇಳಿಕೊಳ್ಳುತ್ತಿದ್ದೇನೆ. ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಈ ಮನೆಯ ಕಾರ್ಯ ಕಲಾಪಗಳಲ್ಲಿ ಭಾಗವಹಿಸಿ ಸರ್ಕಾರದ ಮೇಲೆ ತಮ್ಮ ಅಸ್ತ್ರಗಳನ್ನು ಬಿಟ್ಟರೆ, ಸರ್ಕಾರ ಅವುಗಳನ್ನು ಎದುರಿಸಿ ಉತ್ತರ ಕೊಡಲಿಕ್ಕೆ ಸರಿಯಾಗುತ್ತದೆ.

ಶ್ರೀ ಎಂ.ಎಸ್. ಕೃಷ್ಣನ್.—ಮಾತುಕತೆ ನಡೆದಾಗ ಏನು ನಡೆಯಿತು ಎಂಬುದು ಅವರಿಗೂ ಗೊತ್ತಿದೆ. ಬಾವಿಯಲ್ಲಿ ಕಂಳಿತಿರತಕ್ಕವರು ಮೇಲೆ ಬರಲಿಕ್ಕೆ ಏನು ಮಾಡಬೇಕೆಂಬುದರ ಬಗ್ಗೆ ಚರ್ಚೆಯಾಗಿದೆ. ಅದರ ಬಗ್ಗೆ ಇವತ್ತಿನ ದಿವಸ ತೀರ್ಮಾನ ಮಾಡಿ. ಸಂಧಾನದ ಮುಖಾಂತರ ದೊಡ್ಡ ಮನಸ್ಸು ಮಾಡಿ, ಸಂಧಾನ ಮಾಡಿದರೆ ಸಮಸ್ಯೆ ಬಗೆ ಹರಿಯುತ್ತದೆ. ನೀವು ಇದ್ದೀರಿ ಮಾನ್ಯ ರಾಚಯ್ಯನವರು ಇದ್ದಾರೆ. ಪರಿಣತರಿದ್ದೀರಿ, ವಿಷಯ ತಿಳಿದಂತಹ ಜನ, ಅನುಭವ ಇರುವವರು ನೀವು ಈ ರೀತಿ ಮಾಡುತ್ತೀರಿ ಎಂದರೆ ಹೇಗೆ? ಮಾನ್ಯ ನಾರಾಯಣಕುಮಾರ್‌ರವರು ಹೇಳಿದರೆ ಬೇರೆ ಸಮಾಚಾರ, ಇಷ್ಟೆಲ್ಲ ಗೊತ್ತಾಗುವುದಿಲ್ಲವೆಂದು ಹೇಳಬಹುದು, ಅವರು ಸಹ ಒಳ್ಳೆಯವರು, ಆದಲ್ಲ ಪ್ರಶ್ನೆ. ನೀವು ಈ ರೀತಿ ಹಠ ಹಿಡಿದರೆ ಹೇಗೆ? ಅದರ ಬಗ್ಗೆ ಯೋಚನೆ ಮಾಡಿ ತೀರ್ಮಾನ ಮಾಡಿ.

ಶ್ರೀ ಜೆ. ನಾರಾಯಣಕುಮಾರ್.—ವಿರೋಧಪಕ್ಷದವರು ಬಾವಿಯೊಳಗೆ ಸೇರಿಕೊಂಡಿದ್ದಾರೆ. ದುರ್ಯೋಧನ ಭೀಮ ಬರುತ್ತಾನೆಂದು ವೈಶಂಪಾಯನ ಸರೋವರದಲ್ಲಿ ಸೇರಿಕೊಂಡ ಹಾಗೆ ಸೇರಿಬಿಟ್ಟಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಆ ಕಡೆಯಲ್ಲೂ ಹಿರಿಯ ಸದಸ್ಯರು ಇದ್ದಾರೆ ಅನುಭವಿಗಳು ಅಲ್ಲೂ ಇದ್ದಾರೆ ಇಲ್ಲೂ ಇದ್ದಾರೆ. ಒಂದು ನಿರ್ಣಯ ತೆಗೆದುಕೊಳ್ಳಬೇಕಾದರೆ ಎರಡೂ ಕಡೆಯ ಸದಸ್ಯರು ಸೇರಬೇಕು. ನಾನು ಆ ವಿಚಾರ ಚರ್ಚೆ ಮಾಡುವುದಿಲ್ಲ, ಆ ವಾದ ಬೇಡ, ನಾನು ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ ಮಾನ್ಯ ವಿರೋಧಪಕ್ಷದವರು ತಮ್ಮ ತಮ್ಮ ಸ್ಥಾನಗಳಿಗೆ ಬರಬೇಕು. ಅದಕ್ಕೆ ಮಾನ್ಯ ಕೃಷ್ಣನ್‌ರವರು ಸಹಕಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಸಭೆಯ ಕಾರ್ಯಕಲಾಪ ನಡೆಯಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ನಾವು ಎಷ್ಟು ಮಾತನಾಡಿದರೂ ಸಹ ನಾವು ಹೀಗೆಯೇ ಈ ಮನೆಯನ್ನು ನಡೆಸಿಕೊಂಡು ಹೋಗುತ್ತೇವೆಂದರೆ ನಾವೇನು ಮಾಡುವುದು? ಈ ಕಡೆಯವರು ಮಾಡಿರುವುದು ನೂರಕ್ಕೆ ನೂರರಷ್ಟು ಸರಿಯೆಂದು ನಾನು ಹೇಳುವುದಿಲ್ಲ. ತಪ್ಪುಗಳು ಆಗುತ್ತವೆ, ಮಾಡುತ್ತೇವೆ, ಅದನ್ನು ಸಮಯ ಸಂದರ್ಭ ಬಂದಾಗ ಮಾತನಾಡೋಣ. ಆ ಕಡೆಯವರು ಸಹ ನೂರಕ್ಕೆ ನೂರರಷ್ಟು ಸರಿ ಇದ್ದಾರೆಂದು ನಾನು ಹೇಳುವುದಿಲ್ಲ. ನಿನ್ನೆ ದಿವಸ ಮಾನ್ಯ ಸೀಧ್ಹಾರವರು ಧೈರ್ಯ ಮಾಡಿ ಒಳ್ಳೆಯ ಭಾಷಣದಲ್ಲಿ ಹೇಳಿದ್ದಾರೆ. ಪಶ್ಚಾತ್ತಾಪ ಪಡುತ್ತೇನೆ, ಏನೋ ಕೋಪದಲ್ಲಿ ಆಯಿತು ಎಂದು ಹೇಳಿದರು. ಅವರು ಆ ರೀತಿ ಹೇಳಿದರೆ ನಾನು ಇಲ್ಲಿಯೇ ಇದ್ದೆ. ನೂರಕ್ಕೆ ನೂರರಷ್ಟು ಯಾರು ಸರಿ ಇರುವುದಿಲ್ಲ ಆಗಿರುವುದನ್ನು ಸರಿಪಡಿಸಿಕೊಂಡು ಆಮೇಲೆ ಚರ್ಚೆ ಮುಂದುವರಿಸೋಣ. ಮೊದಲನೆಯದು ಕರ್ತವ್ಯ ಎನ್ನುವುದು ತಪ್ಪು ಕಲ್ಪನೆ. ಮೊದಲನೆ ಕರ್ತವ್ಯ ನಾರ್ಮಲ್‌ಸಿಯನ್ನು ಏನಿದೆ ಅದನ್ನು ರೆಸ್ಯೂರ್ ಮಾಡುವುದು. ಎರಡನೆಯ ಕರ್ತವ್ಯ ಡಿಮಾಂಡ್ಸ್‌ಗಳ ಬಗ್ಗೆ ಎಲ್ಲರೂ ಚರ್ಚೆ ಮಾಡಿ ಅವುಗಳನ್ನು ಪಾಸ್ ಮಾಡತಕ್ಕದ್ದು. ಚರ್ಚೆಯಲ್ಲಿ ಎಲ್ಲರೂ ಭಾಗವಹಿಸಬೇಕು. ನೀವು ಮೊದಲನೆಯ ಕರ್ತವ್ಯವನ್ನು ಚ್ಯುತಿ ಮಾಡಿ, ಎರಡನೇ ಕರ್ತವ್ಯ ದೊಡ್ಡ ಕರ್ತವ್ಯ ಅದನ್ನು ಮಾಡುತ್ತೇವೆಂದರೆ ಅದು ನ್ಯಾಯ ಆಗುವುದಿಲ್ಲ, ಇಂತಹದ್ದನ್ನು ನಾವು ಒಪ್ಪಿಕೊಳ್ಳುವುದಿಲ್ಲ ಸ್ವಾಮಿ. ನಾವು ಇದಕ್ಕೆ ಪ್ರತಿಭಟನೆ ತೋರಿಸಿ ವಾಕ್‌ಔಟ್ ಮಾಡಿ ಸಭೆಯಿಂದ ಹೊರಗಡೆ ಹೋಗುತ್ತೇವೆ, ದಯವಿಟ್ಟು ನಮ್ಮನ್ನು ಕ್ಷಮಿಸಿ.

ಶ್ರೀ ಪಂಪಾಪತಿ.—ಈ ರೀತಿ ಸರ್ಕಾರದವರು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕಾರ್ಯ ಕಲಾಪ ನಡೆಸುತ್ತಿರುವುದು ಸರಿಯಾದುದಲ್ಲ. ಇದು ನಿಜವಾಗಿಯೂ ನಮ್ಮ ರಾಜ್ಯದ ಜನತೆಗೆ ಅವಮಾನ ಮಾಡಿದಂತಾಗುತ್ತದೆ ಆದ್ದರಿಂದ ನಾನು ಈ ಸಂದರ್ಭದಲ್ಲಿ ನಮ್ಮ ನಾಯಕರ ಜೊತೆಯಲ್ಲಿ ಸಭ್ಯತಾಗ ಮಾಡುತ್ತೇನೆ.

(ಸಿ.ಪಿ.ಐ ಮತ್ತು ಸಿ.ಪಿ.ಐ.(ಎಂ.) ಸದಸ್ಯರುಗಳೆಲ್ಲರೂ ಸಭಾತ್ಯಾಗ ಮಾಡಿದರು)

ವಿತ್ತೀಯ ಕಾರ್ಯ ಕಲಾಪಗಳು

1987-88ನೇ ಸಾಲಿನ ಕಂದಾಯ, ಕೈಗಾರಿಕೆ, ವಿನಂಗಾರಿಕೆ ಪಶುಸಂಗೋಪನೆ, ಕೃಷಿಗಣಿಗಳು ತೋಟಗಾರಿಕೆ,ರೇಷ್ಮೆ ವಂಜಂರಾಯಿ, ವಿದ್ಯುಚ್ಛಕ್ತಿ ಯೋಜನೆಗಳು ಅರಣ್ಯ ಮತ್ತು ಭೂವಿಜ್ಞಾನ ಸಮಾಜ ಕಲ್ಯಾಣ ಇಲಾಖೆಗಳ ಬೇಡಿಕೆಗಳ ಮೇಲಿನ ಚರ್ಚೆ ಮತ್ತು ವಂಜೂರಾತಿ

ಅಧ್ಯಕ್ಷರು.—ಮಾನ್ಯ ಸಚಿವರಂಗಳು ಅವರಿಗೆ ಸಂಬಂಧಪಟ್ಟಂತಹ ಇವತ್ತಿನ ದಿವಸದ ಬೇಡಿಕೆಗಳನ್ನು ವಂಡಿಸಬೇಕು.

ಅಭಿಯಾಚನೆ ಕ್ರಮಾಂಕ-೪೩ ಯೋಜನಾ ಇಲಾಖೆಯ ಅಭಿಯಾಚನೆಗಳು

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಮತ್ತು ಕಾರ್ಮಿಕ ವಂತ್ರಿಗಳು).—ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೮ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಯೋಜನಾ ಇಲಾಖೆಯ ಅಭಿಯಾಚನೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೯,೪೬ ೪೮,೦೦೦ ರೂ. ಗಳಿಗಿಂತ ವಿೂರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೦,೦೦,೦೦೦ ರೂ. ಗಳಿಗಿಂತ ವಿೂರದ ಮೊತ್ತವನ್ನು ವಂಜೂರು ಮಾಡಬೇಕೆಂದು ನಾನು ಭಿನ್ನವಿಸಿ, ಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ-೪೯ ಭೂ ಕಂದಾಯ ಇತ್ಯಾದಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೮ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಭೂ ಕಂದಾಯ ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೫೭,೨೮,೫೨,೦೦ ರೂ.ಗಳಿಗಿಂತ ವಿೂರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೪,೦೨,೦೦,೦೦೦ ರೂ.ಗಳಿಗಿಂತ ವಿೂರದ ಮೊತ್ತವನ್ನು ವಂಜೂರು ಮಾಡಬೇಕೆಂದು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ-೫೦ ಮುಂದ್ರಾಂಕ (ಸ್ಟ್ಯಾಂಪುಗಳು) ಮತ್ತು ನೋಂದಣಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೮ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮುದ್ರಾಂಕ (ಸ್ಟ್ಯಾಂಪುಗಳು) ಮತ್ತು ನೋಂದಣಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೫೫,೦೮,೦೦,೦೦೦ ರೂ.ಗಳಿಗಿಂತ ವಿೂರದ ಮೊತ್ತವನ್ನು ವಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ-೫೧ ನೈಸರ್ಗಿಕ ವಿಕೋಪಗಳ ಬಗ್ಗೆ ಪರಿಹಾರ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೮ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನೈಸರ್ಗಿಕ ವಿಕೋಪಗಳ ಪರಿಹಾರಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೬,೪೦,೦೦,೦೦೦ ರೂ.ಗಳಿಗಿಂತ ವಿೂರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨,೦೦,೦೦೦ ರೂ.ಗಳಿಗಿಂತ ವಿೂರದ ಮೊತ್ತವನ್ನು ವಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ-೫೨ ಪುನರ್ವಸತಿ ಯೋಜನೆಗಳಂ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೮ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪುನರ್ವಸತಿ ಯೋಜನೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕ್ಂಥ ವೆಚ್ಚವನ್ನು ಪಹಿಸಲಂ ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೪,೯೭,೦೦೦ರೂ. ಗಳಿಗಿಂತ ಮಿಂರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನಂ ಭಿನ್ನವಿಸಿ ಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ-೫೩ ಮತೀಯ ಮತ್ತು ಧರ್ಮಾದಾಯ ಸಂಸ್ಥೆಗಳು ಇತ್ಯಾದಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೮ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮತೀಯ ಮತ್ತು ಧರ್ಮಾದಾಯ ಸಂಸ್ಥೆಗಳು ಇತ್ಯಾದಿಗಳಿಗೆ ಸಂದಾಯ ಮಾಡಂವಲ್ಲಿ ಬರತಕ್ಕ್ಂಥ ವೆಚ್ಚವನ್ನು ಪಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೦,೮೦,೬೫,೦೦೦ ರೂ.ಗಳಿಗಿಂತ ಮಿರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ-೬೧ ಕಾರ್ಮಿಕ ಮತ್ತು ಉದ್ಯೋಗ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೮ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಾರ್ಮಿಕ ಮತ್ತು ಉದ್ಯೋಗಕ್ಕೆ ಸಂದಾಯ ಮಾಡಂವಲ್ಲಿ ಬರತಕ್ಕ್ಂಥ ವೆಚ್ಚವನ್ನು ಪಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೭,೦೮,೩೭,೦೦೦ ರೂ.ಗಳಿಗಿಂತ ಮಿರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ,

ಶ್ರೀಪತಿ ಕೆ.ಎಸ್. ನಾಗರತ್ನಮ್ಮ.—ನಾವು ಬೇಡಿಕೆಗಳನ್ನು ನಡೆಸಂವುದಕ್ಕೆ ಬಿಡಂವುದಿಲ್ಲ ಅದು ಆಗುವುದಿಲ್ಲ.

ಶ್ರೀ ಎಂ. ಮಂಲ್ಲಿಕಾರ್ಜುನ ಖಾರ್ಗೆ.—ಸಭೆ ಆರ್ಡರ್‌ನಲ್ಲಿ ಇಲ್ಲದೇ ಇರುವಾಗ ಸಭೆಯನ್ನು ಹೇಗೆ ನಡೆಸಂತ್ತೀರಿ?

ಅಧ್ಯಕ್ಷರಂ.—ಬೇಡಿಕೆಗಳನ್ನು ಮಂಂಡಿಸಲಾಯಿತಂ.

ಅಭಿಯಾಚನೆ ಕ್ರಮಾಂಕ-೫ ಉದ್ಯಮಗಳು (ಚಿಕ್ಕಪುಟ್ಟ ಉದ್ಯಮಂಗಳಂ ಮತ್ತು ರೇಷ್ಮೆ ವಸ್ತ್ರೋದ್ಯಮ ಹೊರತು)

ಶ್ರೀ ಜೆ.ಎಚ್. ಪಟೇಲ್(ವಾಣಿಜ್ಯ ಕೈಗಾರಿಕಾ ಮತ್ತು ವಿದ್ಯುತ್ ಮಂತ್ರಿಗಳು).—ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಉದ್ಯಮಂಗಳಿಗೆ (ಚಿಕ್ಕಪುಟ್ಟ ಉದ್ಯಮಗಳು ಮತ್ತು ರೇಷ್ಮೆ ವ್ಯವಸಾಯದ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕ್ಂಥ ವೆಚ್ಚವನ್ನ ಪಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೭,೩೭,೩೯,೦೦೦ ರೂ.ಗಳಿಗಿಂತ ಮಿರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೫೫,೮೯,೦೦,೦೦೦ ರೂ:ಗಳಿಗಿಂತ ಮಿರಾದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ-೭ ಚಿಕ್ಕಪುಟ್ಟ ಉದ್ಯಮಂಗಳಂ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೮ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಚಿಕ್ಕಪುಟ್ಟ ಉದ್ಯಮಂಗಳಿಗೆ ಸಂದಾಯ ಮಾಡಂವಲ್ಲಿ ಬರತಕ್ಕ್ಂಥ ವೆಚ್ಚವನ್ನು ಪಹಿಸಲಂ ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೪,೩೧,೭೧,೦೦೦ ರೂ.ಗಳಿಗಿಂತ ಮಿರಾದ ಮೊತ್ತವನ್ನು ಮತ್ತು ಬಂಡವಾಳ

ಖಾತೆಯಲ್ಲಿ ೭,೮೪,೮೫,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ-೪೮ ವಿದ್ಯುಚ್ಛಕ್ತಿ ಯೋಜನೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೮ರಂದು ಕೊನೆಗೊಳ್ಳುವ ವರ್ಷದಲ್ಲಿ ವಿದ್ಯುಚ್ಛಕ್ತಿ ಯೋಜನೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಪಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೪,೨೦,೯೧,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨,೩೦,೨೨,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಧ್ಯಕ್ಷರು.— ಬೇಡಿಕೆಗಳನ್ನು ಮಂಡಿಸಲಾಯಿತು.

ಅಭಿಯಾಚನೆ ಕ್ರಮಾಂಕ-೬ ಗಣಿಗಳು ಮತ್ತು ಭೂ ವಿಜ್ಞಾನ

ಶ್ರೀ ಜೆ.ಎಸ್ ದೇಶಮುಖ್(ಅರಣ್ಯ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೮ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗಣಿಗಳು ಮತ್ತು ಭೂ ವಿಜ್ಞಾನಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಪಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೪,೫೫,೭೩,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ ೨೨ ಅರಣ್ಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೮ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಅರಣ್ಯಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಪಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೫೮,೪೨,೦೧,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೧,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ-೨೨ಹರಿಜನ-ಗಿರಿಜನ ಮತ್ತು ಹಿಂದುಳಿದ ವರ್ಗದಪರ ಕಲ್ಯಾಣ

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೮ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಹರಿಜನ-ಗಿರಿಜನ ಮತ್ತು ಹಿಂದುಳಿದ ವರ್ಗದವರ ಕಲ್ಯಾಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಪಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೪೫೫,೨೩,೮೩,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧,೪೮,೦೦,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ-೭೩ ಆದಿವಾಸಿ ಪ್ರದೇಶ ಉಪಯೋಜನೆ

ರಾಜ್ಯಪಾಲರು ಶಿಫಾರಸ್ಸಿನ ಮೇರೆಗೆ ೩೧-೩-೧೯೮೮ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಆದಿವಾಸಿ, ಪ್ರದೇಶ ಯೋಜನೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನು ಪಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೫೩,೩೪,೦೭.೦೦. ರೂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೩,೩೦,೦೦,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ–೬೪ ವಿಶೇಷ ಘಟಕ ಯೋಜನೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೮ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿಶೇಷ ಘಟಕ ಯೋಜನೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೧,೨೦,೯೮,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೩,೧೦,೦೦,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ–೬೫ ಸಮಾಜ ಕಲ್ಯಾಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೮ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಮಾಜ ಕಲ್ಯಾಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೨೨,೪೧,೩೪,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧,೦೦,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ–೩ ಪಶುಸಂಗೋಪನ ಮಂತ್ರಿ ಡೇರಿ ಅಭಿವೃದ್ಧಿ

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ಕೋಲ್ಕೆ) ಪಶುಸಂಗೋಪನೆ ಮತ್ತು ಮತ್ಸ್ಯೋದ್ಯಮ ಮಂತ್ರಿಗಳು).— ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೮ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪಶುಸಂಗೋಪನಾ ಮತ್ತು ಡೇರಿ ಅಭಿವೃದ್ಧಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೫,೫೫,೬೭,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೯,೦೦,೦೦,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ–೪ ಮೀನುಗಾರಿಕೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೮ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮೀನುಗಾರಿಕೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೫೫,೩೮,೫೨,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೯೩,೫೦,೮೦೦ ರೂಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ–೮ ರೇಷ್ಮೆ ವ್ಯವಸಾಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೮ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರೇಷ್ಮೆ ವ್ಯವಸಾಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೮,೨೫,೭೬,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨,೫೧,೦೦,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ–೧ ಭೂಸಾರ ಮತ್ತು ಜಲರಕ್ಷಣೆ ವ್ಯವಸಾಯ (ತೋಟಗಾರಿಕೆಯ ಮತ್ತು ಬರಗಾಲಕ್ಕೆ ಗುರಿಯಾದ ಪ್ರದೇಶಗಳ ಯೋಜನೆ ಹೊರತು)

ಶ್ರೀ ಬಸವರಾಜ ಪಾಟೀಲ್ ಅನ್ವರಿ (ಕೃಷಿ ಮತ್ತು ತೋಟಗಾರಿಕೆ ರಾಜ್ಯ ಮಂತ್ರಿಗಳು).—

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೮ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಭೂಸಾರ ಮಂತ್ತು ಜಲರಕ್ಷಣೆ ವ್ಯವಸಾಯಕ್ಕೆ (ತೋಟಗಾರಿಕೆ ಮತ್ತು ಬರಗಾಲಕ್ಕೆ ಗುರಿಯಾದ ಪ್ರದೇಶಗಳ ಯೋಜನೆ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ ಕಾರಕ್ಕೆ ರಾಜಸ್ವ ಖಾತೆಯಲ್ಲಿ ೬೭,೪೬,೩೩,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೫,೭೭,೮೩,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡ ಜೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ–೨ ತೋಟಗಾರಿಕೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೮ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ತೋಟಗಾರಿಕೆಗೆ ಸಂದಾಯ ಮಾಡಂವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೧,೯೦,೯೮,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

(ವಿರೋಧ ಪಕ್ಷದ ಕಾಂಗ್ರೆಸ್ (ಐ) ಸದಸ್ಯರು ತೀವ್ರ ಪ್ರತಿಭಟನೆ ವ್ಯಕ್ತಪಡಿಸಿದರು)

ಅಧ್ಯಕ್ಷರು.— ಎಲ್ಲಾ ಬೇಡಿಕೆಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ನಾವು ಮಾತನಾಡುವುದೆಲ್ಲಾ ರೆಕಾರ್ಡ್ ಆಗಬೇಕು.

ಅಧ್ಯಕ್ಷರು. — ನೀವು ಇಲ್ಲಿಂದ ಮಾತನಾಡಿದರೆ ರೆಕಾರ್ಡ್‌ಗೆ ಹೋಗುವುದಿಲ್ಲ,

(ಗೊಂದಲ)

ಅಧ್ಯಕ್ಷರು.—ನೀವು ಏನೇ ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ನಿಮ್ಮ ನಿಮ್ಮ ಸ್ಥಳದಲ್ಲಿ ನಿಂತು ಮಾತನಾಡಿ. ಸಭೆಯ ತೀರ್ಮಾನದ ಪ್ರಕಾರ ಹೋಗಬೇಕಾಗುತ್ತದೆ.

(ಸಭಾಧ್ಯಕ್ಷರ ಪೀಠದ ಮುಂದಿನ ಅಂಗಳದಲ್ಲಿ ನಿಂತು ಕಾಂಗ್ರೆಸ್ (ಐ) ಪಕ್ಷದ ಸದಸ್ಯರು ಒಂದೇ ಸಮನೆ ಮಾತನಾಡುತ್ತಿದ್ದರು)

ಅಧ್ಯಕ್ಷರು.—ದಯವಿಟ್ಟು ನಿಮ್ಮ ಸ್ಥಳಕ್ಕೆ ಹೋಗಿ ನೀವು ಏನೇ ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. ನೀವು ಮಾತನಾಡಿದ್ದೆಲ್ಲಾ ಎಕ್ಸ್‌ಪಂಜ್ ಆಗಿದೆ.

(ಕಾಂಗ್ರೆ ಸದಸ್ಯರು ಪ್ರತಿಭಟಿಸುತ್ತಲೇ ಇದ್ದರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರ ಒತ್ತಡಕ್ಕೆ ನೀವು ಮಣಿಯಬಾರದು.

ಅಧ್ಯಕ್ಷರು.—ನೀವು ಇಲ್ಲಿ ನಿಂತು ಮಾತನಾಡಿದರೆ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ಮನೆಗೆ ತಾವು ಸುಪ್ರೀಂ .....

(ಗೊಂದಲ)

ಅಧ್ಯಕ್ಷರು.—ನಿಮ್ಮ ಸ್ಥಳಕ್ಕೆ ಹೋಗಿ ಮಾತನಾಡಿದರೆ ನಾನು ಅವಕಾಶ ಕೊಡುತ್ತೇನೆ. ನೀವು ಈ ರೀತಿ ಮಾತನಾಡಿದರೆ, ಅವರಿಗೆ ಮಾತನಾಡಲಿಕ್ಕೆ ಅವಕಾಶ ಕೊಡಲಿಲ್ಲ ಎಂದರೆ ಬೇಡಿಕೆಗಳನ್ನು ನಾನು ಓಟಿಗೆ ಹಾಕಿಬಿಡುತ್ತೇನೆ.

(ಕಾಂಗ್ರೆ ಸದಸ್ಯರಿಂದ ಪುನಃ ಪ್ರತಿಭಟನೆ)

ಅಧ್ಯಕ್ಷರು.—ನಾನು ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವವೇನೆಂದರೆ

''೩೧-೩-೧೯೮೮ಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ ೪೩,೪೯, ೫೦, ೫೧, ೫೨, ೫೩, ೬೧, ೫, ೭೨, ೩, ೪, ೮, ೧, ೨, ೬೨, ೬೩, ೬೪ ಹಾಗೂ ೬೫ ಇವುಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ಬೇಡಿಕೆಗಳ ಪಟ್ಟಿಯಲ್ಲಿರುವ ವೊತ್ತಕ್ಕೆ ವಿುರದ ವೆುಬಲಗನ್ನು ಮಂಜೂರು ಮಾಡಬೇಕು''.

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ –೪೩ ಯೋಜನಾ ಇಲಾಖೆಯ ಅಭಿಯಾಚನೆಗಳು

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೮ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಯೋಜನಾ ಇಲಾಖೆಯ ಅಭಿಯಾಚನೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೯,೪೬,೪೦೦ ರೂ. ಗಳಿಗಿಂತ ವಿುರದ ವೊತ್ತವನ್ನು, ಮತ್ತು ಬಂಡವಾಳ ಖಾತೆಯಲ್ಲಿ ೨೦,೦೦,೦೦೦ ರೂ. ಗಳಿಗಿಂತ ವಿುರದ ವೊತ್ತವನ್ನು ಮಂಜೂರು ಮಾಡುವುದ್ದೆ

ಅಭಿಯಾಚನೆ ಕ್ರಮಾಂಕ—೪೪ ಭೂ ಕಂದಾಯ ಇತ್ಯಾದಿ

''ರಾಜ್ಯಪಾಲರ ಶಿಫಾರಸ್ಸಿನ ವೇರೆಗೆ ೩೧–೩–೧೯೮೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಭೂ ಕಂದಾಯ ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೫೭,೨೮.೫೨,೦೦೦ ರೂ. ಗಳಿಗಿಂತ ವಿುರದ ವೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೪,೦೨,೦೦,೦೦೦ ರೂ.ಗಳಿಗಿಂತ ವಿುರದ ವೊತ್ತವನ್ನು ಮಂಜೂರು ಮಾಡಲಾಗುವುದು.

ಅಭಿಯಾಚನೆ ಕ್ರಮಾಂಕ–೫೦ ಮುದ್ರಾಂಕ (ಸ್ಟ್ಯಾಂಪುಗಳು) ಮತ್ತು ನೋಂದಣಿ

''ರಾಜ್ಯಪಾಲರ ಶಿಫಾರಸ್ಸಿನ ವೇರೆಗೆ ೩೧–೩–೧೯೮೮ ರಂದು ಕೊನೆಗೊಳ್ಳುವ ಆರ್ಥಿಕವರ್ಷದಲ್ಲಿ ಮುದ್ರಾಂಕ (ಸ್ಟ್ಯಾಂಪುಗಳು) ಮತ್ತು ನೋಂದಣಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೫,೦೮,೦೦,೦೦೦ ರೂ, ಗಳಿಗಿಂತ ವಿುರದ ವೊತ್ತವನ್ನು ಮಂಜೂರು ವಡಾಡುವುದು.

ಅಭಿಯಾಚನೆ ಕ್ರಮಾಂಕ–೫೧ ನೈಸರ್ಗಿಕ ವಿಕೋಪಗಳ ಬಗ್ಗೆ ಪರಿಹಾರ

''ರಾಜ್ಯಪಾಲರ ಶಿಫಾರಸ್ಸಿನ ವೇರೆಗೆ ೩೧–೩–೧೯೮೮ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನೈಸರ್ಗಿಕ ವಿಕೋಪಗಳ ಪರಿಹಾರಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೬,೪೦,೦೦,೦೦೦ ರೂ. ಗಳಿಗಿಂತ ವಿುರದ ವೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨,೦೦,೦೦೦ ರೂ.ಗಳಿಗಿಂತ ವಿುರದ ವೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ—೫೨ ಪುನರ್ವಸತಿ ಯೋಜನೆಗಳು

''ರಾಜ್ಯಪಾಲರ ಶಿಫಾರಸ್ಸಿನ ವೇರೆಗೆ ೩೧–೩–೧೯೮೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪುನರ್ವಸತಿ ಯೋಜನೆಗಳಿಗೆ ಸಂದಾಯ ವಡಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೪೧,೯೭,೦೦೦ ರೂ.ಗಳಿಗಿಂತ ವಿುರದ ವೊತ್ತವನ್ನು ಮಂಜೂರು ವಾಡುವುದು'

ಅಭಿಯಾಚನೆ ಕ್ರಮಾಂಕ—೫೩ ಮಂತೀಯಂ ಮತ್ತು ಧರ್ಮಾದಾಯ ಸಂಸ್ಥೆಗಳು ಇತ್ಯಾದಿ

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೮ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮಂತೀಯ ಮತ್ತು ಧರ್ಮಾದಾಯ ಸಂಸ್ಥೆಗಳು ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೦,೮೦,೬೫,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ—೬೧ ಕಾರ್ಮಿಕ ಮತ್ತು ಉದ್ಯೋಗ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಾರ್ಮಿಕ ಮತ್ತು ಉದ್ಯೋಗಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೭,೦೮,೩೭,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ—೫೫ ಉದ್ಯಮಂಗಳು (ಚಿಕ್ಕಪುಟ್ಟ ಉದ್ಯಮಗಳು ಮತ್ತು ರೇಷ್ಮೆ ವ್ಯವಸಾಯದ ಹೊರತು)

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಉದ್ಯಮಂಗಳಿಗೆ (ಚಿಕ್ಕಪುಟ್ಟ ಉದ್ಯಮಗಳು ಮಂತ್ತು ರೇಷ್ಮೆ ವ್ಯವಸಾಯದ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೭,೩೭,೩೯,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೫,೮೯,೯೯,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ—೭ ಚಿಕ್ಕಪುಟ್ಟ ಉದ್ಯಮಗಳು

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಚಿಕ್ಕಪುಟ್ಟ ಉದ್ಯಮಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೪,೩೧,೭೧,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೭,೮೪,೮೫,೦೦೦ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ—೪೮ ವಿದ್ಯುಚ್ಚಕ್ತಿ ಯೋಜನೆಗಳು

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿದ್ಯುಚ್ಚಕ್ತಿ ಯೋಜನೆಗಳು ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೪,೨೯,೯೧,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨,೩೦,೬೨,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು'',

ಅಭಿಯಾಚನೆ ಕ್ರಮಾಂಕ—೬ ಗಣಿಗಳು ಮತ್ತು ಭೂ ವಿಜ್ಞಾನ

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗಣಿಗಳು ಮತ್ತು ಭೂ ವಿಜ್ಞಾನಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೯,೫೩,೭೩,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ—೨೨ ಅರಣ್ಯ

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಅರಣ್ಯಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಪಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೫೮,೪೨,೦೦,೦೦೦ ರೂಪಾಯಿಂಗಳಿಗಿಂತ ಮಿಂರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೧,೦೦,೦೦೦ ರೂಪಾಯಿಗಳಿಗಿಂತ ಮಿಂರದ ಮೊತ್ತವನ್ನು ಮಂಜೂರು ಮಾಡುವುದಂ''

ಅಭಿಯಾಚನೆ ಕ್ರಮಾಂಕ : ೩ ಪಶುಸಂಗೋಪನೆ ಮತ್ತು ಡೇರಿ ಅಭಿವೃದ್ಧಿ

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೮ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪಶುಸಂಗೋಪನಾ ಮತ್ತು ಡೈರಿ ಅಭಿವೃದ್ಧಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಪಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೫,೫೫,೬೭,೦೦೦ ರೂಪಾಯಿಗಳಿಗಿಂತ ಮಿಂರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೯,೦೦,೦ೆ,೦೦೦ ರೂಪಾಯಿಗಳಿಗಿಂತ ಮಿಂರದ ಮೊತ್ತವನ್ನು ಮಂಜೂರು ಮಾಡುವುದು.''

ಅಭಿಯಾಚನೆ ಕ್ರಮಾಂಕ : ೪ ಮಿನುಗಾರಿಕೆ

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೮ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮಿನುಗಾರಿಕೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಪಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೫,೩೮,೫೨,೦೦೦ ರೂಪಾಯಿಗಳಿಗಿಂತ ಮಿಂರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೯೩,೫೦,೦೦೦ ರೂ. ಗಳಿಗಿಂತ ಮಿಂರದ ಮೊತ್ತವನ್ನು ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ : ೫ ರೇಷ್ಮೆ ವ್ಯವಸಾಯ

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೮ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರೇಷ್ಮೆ ವ್ಯವಸಾಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಪಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೮,೨೫,೭೬,೦೦೦ ರೂಪಾಯಿಗಳಿಗಿಂತ ಮಿಂರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨,೫೧,೦೦,೦೦೦ ರೂ. ಗಳಿಗಿಂತ ಮಿಂರಿದ ಮೊತ್ತವನ್ನು ಮಂಜೂರು ಪಾಡುವುದು.''

ಅಭಿಯಾಚನೆ ಕ್ರಮಾಂಕ ; ೧ ಭೂಸಾರ ಮತ್ತು ಜಲರಕ್ಷಣೆ ವ್ಯವಸಾಯ (ತೋಟಗಾರಿಕೆಯ ಮತ್ತು ಬರಗಾಲಕ್ಕೆ ಗುರಿಯಾದ ಪ್ರದೇಶಗಳ ಯೋಜನೆ ಹೊರತು)

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೮ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಭೂಸಾರ ಮತ್ತು ಜಲರಕ್ಷಣೆ ವ್ಯವಸಾಯಕ್ಕೆ (ತೋಟಗಾರಿಕೆ ಮತ್ತು ಬರಗಾಲಕ್ಕೆ ಗುರಿಯಾದ ಪ್ರದೇಶಗಳ ಯೋಜನೆ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಪಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೬೭,೪೬,೩೩,೦೦೦ ರೂಪಾಯಿಗಳಿಗಿಂತ ಮಿಂರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೫,೬೭,೮೩,೦೦೦ ರೂಪಾಯಿಗಳಿಗಿಂತ ಮಿಂರದ ಮೊತ್ತವನ್ನು ಮಂಜೂರು ಮಾಡುವುದು.''

ಅಭಿಯಾಚನೆ ಕ್ರಮಾಂಕ : ೨ ತೋಟಗಾರಿಕೆ

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೮ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ತೋಟಗಾರಿಕೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಪಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೧,೯೦,೯೮,೦೦೦ ರೂ.ಗಳಿಗಿಂತ ಮಿಂರದ ಮೊತ್ತವನ್ನು ಮಂಜೂರು ಮಾಡುವುದಂ''

ಅಭಿಯಾಚನೆ ಕ್ರಮಾಂಕ : ೬೨ ಹರಿಜನ, ಗಿರಿಜನ ಮತ್ತು ಹಿಂದುಳಿದ ವರ್ಗದವರ ಕಲ್ಯಾಣ

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಹರಿಜನ, ಗಿರಿಜನ, ಮತ್ತು ಹಿಂದುಳಿದ ವರ್ಗದವರ ಕಲ್ಯಾಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಪಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೪೫,೨೩ ೮೫ ೦೮೦ ರೂ. ಗಳಿಗಿಂತ ಮಿಗಾರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧,೪೮.೦೦,೦೦೦ ರೂ. ಗಳಿಗಿಂತ ಮಿಗಾರದ ಮೊತ್ತವನ್ನು ಮಂಜೂರು ಮಾಡಂವುದು.''

ಅಭಿಯಾಚನೆ ಕ್ರಮಾಂಕ ; ೬೩ ಆದಿವಾಸಿ ಪ್ರದೇಶ ಉಪಯೋಜನೆ

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಆದಿವಾಸಿ ಪ್ರದೇಶ ಯೋಜನೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಪಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೫,೩೪,೦೭,೦೦೦ ರೂ, ಗಳಿಗಿಂತ ಮಿಗಾರದ ಮೊತ್ತವನ್ನು ಬಂಡವಾಳ ಖಾತೆಯಲ್ಲಿ ೩,೩೦,೦೦,೦೦೦ ರೂ. ಗಳಿಗಿಂತ ಮಿಗಾರದ ಮೊತ್ತವನ್ನು ಮಂಜೂರು ಮಾಡಂವುದು''

ಅಭಿಯಾಚನೆ ಕ್ರಮಾಂಕ ; ೬೪ ವಿಶೇಷ ಘಟಕ ಯೋಜನೆ

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿಶೇಷ ಘಟಕ ಯೋಜನೆಗೆ ಸಂದಾಯ ಮಾಡಂವಲ್ಲಿ ಬರತಕ್ಕಂಥ ವೆಚ್ಚವನ್ನು ಪಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೧,೨೦,೯೮,೦೦೦ ರೂ. ಗಳಿಗಿಂತ ಮಿಗಾರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೩,೧೦,೦೦,೦೦೦ ರೂ. ಗಳಿಗಿಂತ ಮಿಗಾರದ ಮೊತ್ತವನ್ನು ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ ; ೬೫ ಸಮಾಜ ಕಲ್ಯಾಣ

''ರಾಜ್ಯಪಾಲರ ಶಿಫಾರಸ್ಸಿನ ಪ್ರಕಾರ ೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಮಾಜ ಕಲ್ಯಾಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಪಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೨೨,೪೧,೩೪,೦೮೦ ರೂಪಾಯಿಗಳಿಗಿಂತ ಮಿಗಾರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೦೦,೦೦,೦೦೦ ರೂಪಾಯಿಗಳಿಗಿಂತ ಮಿಗಾರದ ಮೊತ್ತವನ್ನು ಮಂಜೂರು ಮಾಡಂವುದು'

ಅಧ್ಯಕ್ಷರು.—ಸಭೆಯನ್ನು ಸೋಮವಾರ ಬೆಳಿಗ್ಗೆ ೧೧ ಗಂಟೆಗೆ ಮುಂದೂಡಲಾಗಿದೆ.

ಸಭೆಯು ೧೧ ಗಂಟೆ ೨೮ ನಿಮಿಷಕ್ಕೆ ಮುಂಕ್ತಾಯವಾಗಿ ಪುನಃ ೨೩ನೇ ಮಾರ್ಚ್ ೧೯೮೭ರ ಸೋಮವಾರ ಬೆಳಿಗ್ಗೆ ೧೧ ಗಂಟೆಗೆ ಸೇರಲು ನಿಶ್ಚಯಿಸಲಾಯಿತು.